8. ಗಮನ ಸೆಳೆಯುವ ಸೂಚನೆಗಳು

1. ವಿಷಯ: ಸರ್ಕಾರಿ ಕಂದಾಯ ಜಮೀನಿನಲ್ಲಿ ವಾಸವಿರುವರಿಗೆ ನಿವೇಶನದ ಹಕ್ಕುಪತ್ರ ನೀಡುವ ಬಗ್ಗೆ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ): ಮಾನ್ಯ ಅಧ್ಯಕ್ಷರೆ, ಸರ್ಕಾರಿ ಕಂದಾಯ ಜಮೀನನಲ್ಲಿ ವಾಸವಿರುವವರಿಗೆ ನಿವೇಶನದ ಹಕ್ಕುಪತ್ರ ನೀಡಲು ಭೂಕಂದಾಯ ಕಾಯ್ದೆ 94(ಸಿ) (11)ರಂತೆ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು): ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 94ಸಿ ಅಡಿಯಲ್ಲಿ ಅಧಿ ಸೂಚನೆ ಸಂಖ್ಯೆ: ಸಂವ್ಯಶಾಇ 47 ಶಾಸನ 2012 ದಿನಾಂಕ: 11–07–2013 ರಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರಿ ಕಂದಾಯ ಜಮೀನುಗಳಲ್ಲಿ ಅನಧಿಕೃತವಾಗಿ ಕಟ್ಟಿಕೊಂಡಿರುವ ಮನೆಗಳನ್ನು ಸಕ್ರಮಗೊಳಿಸಲು ಕರ್ನಾಟಕ ಭೂಕಂದಾಯ ಕಾಯ್ದೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್ಡಿ 376 ಎಲ್ಜಿಪಿ 2013 ದಿನಾಂಕ: 03–03–2014 ರಿಂದ ಜಾರಿಗೆ ಬರುವಂತೆ ನಿಯಮಗಳನ್ನು ರೂಪಿಸಲಾಗಿದೆ.

ಅರ್ಜಿದಾರರು ನಿದಧಿತ ನಮೂನೆಯಲ್ಲಿ ಅರ್ಜಿಗಳನ್ನು ಸಲ್ಲಿಸಲು ದಿನಾಂಕ: 03–03–2014 ರಿಂದ 03–06–2014 ರ ವರೆಗೆ 3 ತಿಂಗಳ ಅವಕಾಶ ನೀಡಲಾಗಿತ್ತು. ಆದರೆ ನಿಯಮಗಳನ್ನು ರೂಪಿಸಿದ ನಂತರ ಲೋಕ ಸಭಾ ಚುನಾವಣೆ ಪ್ರಕ್ರಿಯೆ ಪ್ರಾರಂಭಗೊಂಡ ಕಾರಣ ಈ ಅವಧಿಯನ್ನು ದಿನಾಂಕ: 26–06–2014 ರಿಂದ ಜಾರಿಗೆ ಬರುವಂತೆ ಪುನಃ 6 ತಿಂಗಳ ಅವಧಿಗೆ ವಿಸ್ತರಿಸಲಾಗಿದೆ.

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಉತ್ತರ ಕೊಟ್ಟು ಕಂದಾಯ ಸಚಿವರು ಹೇಳಿದ್ದಾರೆ, extend ಮಾಡಿದ್ದಾರೆ.

ಅಧ್ಯಕ್ಷರು: ಈಗಾಗಲೇ ಕೊಟ್ಟುಬಿಟ್ಟಿದ್ದಾರೆ. Notification ಬಂದಿದೆ. 6 ತಿಂಗಳು extend ಮಾಡಿದ್ದಾರೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಜೂನ್‌ವರೆಗೆ ಸಮಯ ಕೊಟ್ಟಿದ್ದೇವೆ. Code of Conduct ಬಂದಿದ್ದರಿಂದ extend ಮಾಡಿಕೊಟ್ಟಿದ್ದೇವೆ.

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಕೆಲವು ಪಂಚಾಯಿತಿಗಳು ಅಕ್ರಮವಾಗಿ ಮನೆ ಕಟ್ಟಿದವರಿಗೆ ಕಂದಾಯ ತೆಗೆದುಕೊಳ್ಳುತ್ತಿಲ್ಲ. ಅಂದರೆ, ಅವರು ಅಪ್ಲಿಕೇಷನ್ ಕೊಡುವಾಗ ಕಂದಾಯ receipt compulsory ಎಂದು insist ಮಾಡಬೇಕು.

ಅಧ್ಯಕ್ಷರು: ಶ್ರೀನಿವಾಸಪ್ರಸಾದ್‌ರವರೆ, ಈ ಗಮನ ಸೆಳೆಯುವ ಸೂಚನೆಗೆ ಉತ್ತರವನ್ನು ಕೊಟ್ಟಿದ್ದೀರಿ. ಇದರಲ್ಲಿ ಒಂದು ಕೆಲಸ ಮಾಡಿದರೆ ಉತ್ತಮವಾಗುತ್ತದೆ ಶ್ರೀ ರಮೇಶಕುಮಾರ ಎಲ್ಲೋ ಹೋದರು ಏಕೆಂದರೆ, ನಮ್ಮ Village Accountant ಪಂಚಾಯಿತಿ ಸೆಕ್ರೆಟರಿ ಜಂಟಿಯಾಗಿ ಆಯಾ ಗ್ರಾಮದಲ್ಲಿ ಯಾರ್ಯಾರು ಮಂಜೂರಾತಿಯಿಲ್ಲದೆ ಹಿಂದೆ ಮನೆಯನ್ನು ಕಟ್ಟಿಕೊಂಡಿದ್ದಾರೆ ಒಂದು ಪಟ್ಟಿ ಮಾಡಿ ಒಂದು ಸ್ಕೆಚನ್ನು ತಯಾರು ಮಾಡಿ, ಒಂದು ಲಿಸ್ಟ ಮಾಡಿ ಆ ಪ್ರಕಾರವಾಗಿ ನೀವು ಅರ್ಜಿ ತೆಗೆದುಕೊಂಡರೆ ಎಲ್ಲರಿಗೂ ಇದರಲ್ಲಿ ಕೊಡುವುದಕ್ಕೆ ಅವಕಾಶವಿದೆ. ಈ ರೀತಿ ಮಾಡಿ. ಏಕೆಂದರೆ ಹಿಂದೆ ಮಾಡಿದ್ದರೂ ಸಹ 15 ಜನ ಅದನ್ನು ಬಳಸಿಕೊಂಡಿಲ್ಲ.

Village Accountant and P.D.O. ಇಬ್ಬರೂ ಸೇರಿ ಆ ಗ್ರಾಮ ಪಂಚಾಯಿತಿಯೊಳಗೆ ಬರುವ ಎಲ್ಲಾ ಗ್ರಾಮಗಳಲ್ಲಿ ಯಾವ ಯಾವ ಗ್ರಾಮದಲ್ಲಿ ಯಾರ್ಯಾರು ಕಂದಾಯ ಇಲಾಖೆಯ ಜಮೀನಿನಲ್ಲಿ ಮನೆ ಕಟ್ಟಿ ಕೊಂಡಿದ್ದಾರೆ, ಒಬ್ಬರನ್ನೂ ಬಿಡದ ರೀತಿಯಲ್ಲಿ ಅವರ ಪಟ್ಟಿಯನ್ನು ಮಾಡಿ ಕೊಂಡರೆ ಅನುಕೂಲವಾಗುತ್ತದೆ. ಏಕೆಂದರೆ ಕೆಲವು ಪರದೇಶಿಗಳು ಬಹಳ ವರ್ಷಗಳಿಂದ ಕಟ್ಟಿಕೊಂಡಿದ್ದಾರೆ. ಅವರುಗಳಿಗೆ ಇದು ಗೊತ್ತೇ ಇಲ್ಲ. ಈಗ ನಿಮ್ಮಲ್ಲಿ, ನಮ್ಮಲ್ಲಿ ಅನೇಕ ಕಡೆಗಳಲ್ಲಿ ಬಹಳ ವರ್ಷಗಳಿಂದ ಇದ್ದೇವಲ್ಲ, ನಮ್ಮನ್ನು ಯಾರೂ ಕೇಳುವುದಿಲ್ಲ ಎಂದು ಅವರ ತಲೆಯಲ್ಲಿ ತಿಳಿದಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ: ಇದರಲ್ಲಿ ನಮ್ಮ ಜವಬ್ದಾರಿ ಸಹ ಇದೆ. ನಾವು ಸ್ವಲ್ಪ ಪ್ರಚಾರ ಕೆಲಸವನ್ನು ಮಾಡಿದರೆ ಒಳ್ಳೆಯದಾಗುತ್ತದೆ.

ಅಧ್ಯಕ್ಷರು: ಈ ಪಟ್ಟಿ ಮಾಡಿದಾರೆ ನಿಮಗೆ ಅನುಕೂಲವಾಗುತ್ತದೆ. ನಮ್ಮ ಕ್ಷೇತ್ರದಲ್ಲಿ ಇದನ್ನು ಈಗಾಗಲೇ ಪ್ರಾರಂಭ ಮಾಡಿಸಿದ್ದೇನೆ.

ಶ್ರೀ ಕೆ.ಜಿ. ಬೋಪಯ್ಯ: ಕಂದಾಯ receipt insist ಮಾಡಬಾರದು.

ಅಧ್ಯಕ್ಷರು: ಆಯಿತು.

ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಪರಿಷ್ಕರಿಸಿರುತ್ತಾರೆ.

2. ವಿಷಯ: ಗುಲ್ಬರ್ಗ ಜಿಲ್ಲೆಯ ಪಟವಾರಿ/ಶಾನುಭೋಗರುಗಳಿಗೆ ಪಿಂಚಣಿ ಸೌಲಭ್ಯ ಒದಗಿಸಿವ ಬಗ್ಗೆ.

ಶ್ರೀ ಬಿ.ಆರ್.ಪಾಟೀಲ್ (ಆಳಂದ): ಮಾನ್ಯ ಅಧ್ಯಕ್ಷರೆ, ಭೂಕಂದಾಯ ಕಲಂ 16(1)ರನ್ವಯ ನೇಮಕೊಂಡ ಗ್ರಾಮಲೆಕ್ಕಿಗರಿಗೆ ಪಿಂಚಣಿ ಮತ್ತು ಇತರೆ ಸೌಲಭ್ಯಗಳು ಪಡೆಯಲು ಅರ್ಹರಾಗಿರುತ್ತಾರೆಂದು ರಾಜ್ಯ ಉಚ್ಚ ನ್ಯಾಯಾಲಯ ಆದೇಶ ನೀಡಿದ್ದರೂ ಗುಲ್ಬರ್ಗ ಜಿಲ್ಲೆಯ ಪಟವಾರಿ/ ಶಾನುಭೋಗರುಗಳಿಗೆ ಪಿಂಚಣಿ ಸೌಲಭ್ಯ ಒದಗಿಸದಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ವಿ.ಶ್ರೀನಿವಾಸ ಪ್ರಸಾದ್: (ಮಾನ್ಯ ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ ಕರ್ನಾಟಕ ಗ್ರಾಮಾಧಿಕಾರಿಗಳ ರದ್ದಿಯಾತಿ ಕಾಯ್ದೆ 1961 ದಿನಾಂಕ: 01.02.1963ರಿಂದ ಜಾರಿಗೆ ಬಂದಿದ್ದು, ಆ ದಿನಾಂಕದಿಂದ ರಾಜ್ಯದಲ್ಲಿ ಈ ಹಿಂದೆ ಅಸ್ತಿತ್ವದಲ್ಲಿದ್ದ ಶಾನುಭೋಗರು ಇತ್ಯಾದಿ ಅನುವಂಶಿಕೆ ಹುದ್ದೆಗಳನ್ನು ರದ್ದುಗೊಳಿಸಲಾಗಿದೆ. ಹಾಗೂ ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ: 16(1)ರ ಪ್ರಕಾರ ಗ್ರಾಮಲೆಕ್ಕಿಗರನ್ನು ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಹಾಗೂ ಇದೇ ಕಾಯ್ದೆಯ ಕಲಂ: 16(2)ರ ಪ್ರಕಾರ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವವರಿಗೆ ಹಾಲಿ ಕರ್ತವ್ಯ ನಿರ್ವಹಿಸುತಿದ್ದ ಅರ್ಹತೆಯುಳ್ಳ